## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 689 |
| ಸದಸ್ಯರ ಹೆಸರು | ಶ್ರೀ ಮಧು ಜಿ.ಮಾದೇಗೌಡ<br>(ದಕ್ಷಿಣ ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21.08.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಕ್ವಾರಿಗಳಲ್ಲಿ ಕೆಲಸ ನಿರ್ವಹಿಸುವಾಗ ಸಂಭವಿಸಿರುವ ಅವಘಡಗಳಲ್ಲಿ ಮೃತಪಟ್ಟ ಕಾರ್ಮಿಕರ ಸಂಖ್ಯೆ ಎಷ್ಟು; (ವರ್ಷ, ಮೃತಪಟ್ಟ ಕಾರ್ಮಿಕರ ಸಂಖ್ಯೆ, ದಾಖಲಾದ ಪ್ರಕರಣಗಳ ಸಂಖ್ಯೆ, ಅವಘಡ ಸಂಭವಿಸಿದ ಸ್ಥಳ (ಜಿಲ್ಲೆ) ವಿವರವಾದ ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕಲ್ಲುಗಣಿಗಾರಿಕೆಯಲ್ಲಿ ಅವಘಡ ಸಂಭವಿಸಿ ಮೃತಪಟ್ಟ ಮತ್ತು ಗಾಯಗೊಂಡಿರುವ ಕಾರ್ಮಿಕರ ವಿವರ ಕೆಳಕಂಡಂತಿದೆ:<br>• ದಿನಾಂಕ: 26-12-2022 ರಂದು ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು ವ್ಯಾಪ್ತಿಯ ಬಿಸಲವಾಡಿ ಗ್ರಾಮದ ಸರ್ವೆ ನಂ.172ರಲ್ಲಿನ ಕಟ್ಟಡ ಕಲ್ಲುಗಣಿ ಗುತ್ತಿಗೆ ಸಂಖ್ಯೆ-254ರ ಪ್ರದೇಶದಲ್ಲಿ ಗುಡ್ಡ ಕುಸಿದು 03 ಜನ ಕಾರ್ಮಿಕರು ಮೃತಪಟ್ಟಿರುತ್ತಾರೆ. ಸದರಿ ಪ್ರಕರಣದ ಸಂಬಂಧ ಕಲ್ಲುಗಣಿ ಗುತ್ತಿಗೆದಾರರ ವಿರುದ್ಧ ಮಾನ್ಯ JMFC ನ್ಯಾಯಾಲಯ ಚಾಮರಾಜನಗರ ಇಲ್ಲಿ ದಿನಾಂಕ: 27-12-2022 ರಂದು ಖಾಸಗಿ ದೂರು (PCR) ದಾಖಲಿಸಲಾಗಿದೆ.<br>• ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲುಕು ಹುಲುವೇನಹಳ್ಳಿ ಗ್ರಾಮದ ಸರ್ವೆ ನಂ.29ರಲ್ಲಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ದಿನಾಂಕ: 02-07-2026 ರಂದು ಮುಂಜಾನೆ ಬಂಡೆ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಕಲ್ಲು ಬಂಡೆ ಜರಿದುಕೊಂಡು ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರ ಮೇಲೆ ಕಲ್ಲು ಬಿದ್ದು ಅವಘಡ ಉಂಟಾಗಿದ್ದು, ಸದರಿ ಘಟನೆಯಲ್ಲಿ 07 ಜನ ಕಾರ್ಮಿಕರು ಸಾವನ್ನಪ್ಪಿ, 05 ಕಾರ್ಮಿಕರು ಗಾಯಗೊಂಡಿರುತ್ತಾರೆ.<br>• ಘಟನೆಯ ಸಂಬಂಧ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ಕಲ್ಲುಗಣಿ ಗುತ್ತಿಗೆದಾರರು ಹಾಗೂ ಕಲ್ಲುಗಣಿ ಕಾರ್ಯ ಉಸ್ತುವಾರಿ ವಹಿಸಿದ್ದವರ ಮೇಲೆ Crime No- 206/26, ದಿನಾಂಕ: 02-07-2026 ರಂತೆ ಮೊಕದ್ದಮೆ ದಾಖಲಾಗಿದೆ. |
| ಆ) | ದುರಂತ ಪ್ರಕರಣಗಳಲ್ಲಿ ಮೃತ ಕಾರ್ಮಿಕರ ಕುಟುಂಬಕ್ಕೆ / ಅವಲಂಬಿತರಿಗೆ ಒದಗಿಸ ಬಹುದಾದ ಗರಿಷ್ಠ ಪರಿಹಾರ ಮೊತ್ತ ಎಷ್ಟು; | ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗುತ್ತಿಗೆದಾರರು ಸುರಕ್ಷಿತ ಗಣಿಗಾರಿಕೆಗಾಗಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ಅನುಸಾರ ಗಣಿ ಗುತ್ತಿಗೆ ಕರಾರು ಪುಸ್ತಕದ (Form-E) ಭಾಗ-VII ರಲ್ಲಿ ಷರತ್ತುಗಳನ್ನು ನಿಗಧಿಪಡಿಸಿದ್ದು, ಈ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವುದು ಕಲ್ಲುಗಣಿ ಗುತ್ತಿಗೆದಾರರ ಶಾಸನ ಬದ್ಧ ಕರ್ತವ್ಯವಾಗಿದೆ. ವಿವರ ಕೆಳಕಂಡಂತಿದೆ:<br>ಷರತ್ತು ಸಂಖ್ಯೆ-04: TO INDEMNIFY GOVERNMENT AGAINST ALL CLAIMS.<br>The lessee/licensee shall make and pay such reasonable compensation as may be assessed by lawful authority in accordance with the law in force on the subject for all damage, injury or disturbance which may be done by him in exercise of the powers granted by this lease/license and shall indemnify and keep indemnified fully and completely state government against all claims which may be made by any person in respect of any such damage, injury, or disturbance and all costs and expenses in connection therewith.<br>ರಾಜ್ಯ ಸರ್ಕಾರವು ಎಲ್ಲಾ ವಿಧಗಳಲ್ಲಿ ಋಣ ಮುಕ್ತವಾಗಿರತಕ್ಕದ್ದು.<br>ಕಲ್ಲುಗಣಿ ಗುತ್ತಿಗೆದಾರರು, ಗಣಿ ಗುತ್ತಿಗೆಗೆ ಸಂಬಂಧಿಸಿದಂತೆ ಮಾಡುವ ಹಾನಿ, ನಷ್ಟಗಳನ್ನು ಪೂರ್ಣವಾಗಿ ತುಂಬತಕ್ಕದ್ದು. ರಾಜ್ಯ ಸರ್ಕಾರವು ಗುತ್ತಿಗೆಗೆ ಸಂಬಂಧಿಸಿದಂತೆ ಬರುವ ಎಲ್ಲಾ ನಷ್ಟಗಳು, ಕ್ಲೇಮುಗಳಿಂದ ಋಣ ಮುಕ್ತವಾಗಿರತಕ್ಕದ್ದು.<br>GOVERNMENT INDEMNIFIED FROM PAYING COMPENSATION FOR INJURY TO THIRD PARTIES.<br>The lessee/licensee shall make and pay responsible compensation for all damage, injury, disturbance to person or property which may be caused by or on the part of the lessee/ licensee on exercise of the liberties and power granted by these presents and shall at all times have harmless and kept indemnified the |

| | | |
|---|---|---|
| | | state government from and against all sui or tech damage, injuries, claims and damages which may be brought or made by any person or persons in respect of any such damage, injury or disturbance.<br><br>ರಾಜ್ಯ ಸರ್ಕಾರವು 3ನೇ ಪಾರ್ಟಿಗೆ ಸಂಬಂಧಿಸಿದಂತೆ ಋಣ ಮುಕ್ತವಾಗಿರತಕ್ಕದ್ದು:-<br><br>ಗುತ್ತಿಗೆಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ / ಆಸ್ತಿಪಾಸ್ತಿಗೆ ಆಗುವ ಹಾನಿ ನಷ್ಟಗಳನ್ನು ಎಲ್ಲಾ ಕಾಲಕ್ಕೂ ತುಂಬಿಸಲು ಗುತ್ತಿಗೆದಾರರು ಬದ್ಧರಾಗಿರತಕ್ಕದು. ಯಾವುದೇ ವ್ಯಕ್ತಿಗಳಿಂದ/ ಮೂಲಗಳಿಂದ ಹೂಡುವ ದಾವೆಗಳಲ್ಲಿ ರಾಜ್ಯ ಸರ್ಕಾರವು ನಷ್ಟವನ್ನು ತುಂಬಿಕೊಡುವುದರಿಂದ ಸಂಪೂರ್ಣವಾಗಿ ಋಣಮುಕ್ತವಾಗಿರತಕ್ಕದ್ದು.<br><br>• ಮೇಲೆ ತಿಳಿಸಿರುವಂತೆ, ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಅವಘಡಗಳು ಸಂಭವಿಸಿ ಕಾರ್ಮಿಕರು ಮೃತಪಟ್ಟಲ್ಲಿ/ ಗಾಯಗೊಂಡಲ್ಲಿ ಕಲ್ಲುಗಣಿ ಗುತ್ತಿಗೆದಾರನೇ ಕಾರ್ಮಿಕ ಇಲಾಖೆಯ ಕಾಯ್ದೆ ಮತ್ತು ನಿಯಮಾನುಸಾರ ಪರಿಹಾರವನ್ನು ನೀಡಬೇಕಾಗಿದೆ.<br>• ಅದರಂತೆ, ಅವಘಡಗಳು ಸಂಭವಿಸಿ ಮೃತಪಟ್ಟ ವ್ಯಕ್ತಿಯ ಕುಟುಂಬದ ವಾರಸುದಾರರಿಗೆ ಹಾಗೂ ಗಾಯಗೊಂಡ ಕಾರ್ಮಿಕರಿಗೆ ಪರಿಹಾರ ವಿತರಿಸುವಂತೆ ಗುತ್ತಿಗೆದಾರನಿಗೆ ಸೂಚಿಸಿ ಪರಿಹಾರ ನೀಡಲು ಕ್ರಮಕೈಗೊಳ್ಳಲಾಗಿದೆ. |
| ಇ) | ಈವರೆವಿಗೂ ಎಷ್ಟು ಪ್ರಕರಣಗಳಲ್ಲಿ ಪರಿಹಾರ ಮೊತ್ತ ಪಾವತಿಸಲಾಗಿದೆ; ಹಾಗೂ ಪಾವತಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | • ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು ವ್ಯಾಪ್ತಿಯ ಬಿಸಿಲವಾಡಿ ಗ್ರಾಮದ ವ್ಯಾಪ್ತಿಯ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಸಂಭವಿಸಿರುವ ಅವಘಡದಲ್ಲಿ ಮೃತಪಟ್ಟ 03 ಕಾರ್ಮಿಕರ ಕುಟುಂಬದ ವಾರಸುದಾರರಿಗೆ ಕಲ್ಲುಗಣಿ ಗುತ್ತಿಗೆದಾರರಿಂದ ತಲಾ ರೂ.12.50 ಲಕ್ಷ ಪರಿಹಾರ ನೀಡಲಾಗಿದೆ.<br>• ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕು ಹುಲುವೇನಹಳ್ಳಿ ಗ್ರಾಮದ ಸರ್ವೆ ನಂ.29ರಲ್ಲಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಸಂಭವಿಸಿರುವ ಅವಘಡದಲ್ಲಿ ಮೃತಪಟ್ಟಿರುವ 07 ಕಾರ್ಮಿಕರುಗಳ ಪೈಕಿ ಒಬ್ಬರ ಕುಟುಂಬದ ವಾರಸುದಾರರಿಗೆ ರೂ.10.00 ಲಕ್ಷ ಮತ್ತು ಗಾಯಗೊಂಡಿರುವ 05 ವ್ಯಕ್ತಿಗಳ ಪೈಕಿ ಒಬ್ಬರಿಗೆ ರೂ.5.00 ಲಕ್ಷ ಪರಿಹಾರ ನೀಡಲಾಗಿದೆ.<br>• ಉಳಿದ 06 ಮೃತಪಟ್ಟ ಕಾರ್ಮಿಕರ ಕುಟುಂಬದ ವಾರಸುದಾರರಿಗೆ ಹಾಗೂ ಗಾಯಗೊಂಡ 05 ಕಾರ್ಮಿಕರಿಗೆ ಪರಿಹಾರದ ಮೊತ್ತವನ್ನು ನೀಡಲು ಕಲ್ಲುಗಣಿ ಗುತ್ತಿದಾರರು ಸಮ್ಮತಿಸಿದ್ದು, ಸದರಿ ಕುಟುಂಬದವರು ಉತ್ತರ ಭಾರತದವಾಗಿರುವುದರಿಂದ ಅವರುಗಳ ಕಾನೂನು ಬದ್ಧ ವಾರಸುದಾರರನ್ನು ಪತ್ತೆ ಹಚ್ಚುವ ಕಾರ್ಯ ಪ್ರಗತಿಯಲ್ಲಿದೆ. |
| ಈ) | ಕ್ವಾರಿಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಒದಗಿಸಬೇಕಾಗಿರುವ ಸುರಕ್ಷತಾ ಕ್ರಮಗಳೇನು; ಇದನ್ನು ಇಲಾಖಾ ಅಧಿಕಾರಿಗಳು ಹೇಗೆ ಖಚಿತಪಡಿಸಿಕೊಳ್ಳುತ್ತಾರೆ? | • Mines Act-1952 ರನ್ವಯ ಭಾರತ ಸರ್ಕಾರದ ಕಾರ್ಮಿಕ ಮಂತ್ರಾಲಯದ ಅಧೀನದಲ್ಲಿರುವ Director General Mines Safety (DGMS) ಸಂಸ್ಥೆಯಲ್ಲಿ ಕಲ್ಲುಗಣಿಗಳನ್ನು ನೋಂದಾಯಿಸಿದ್ದು, DGMS ಸಂಸ್ಥೆಯು ಸದರಿ ಗಣಿ ಗುತ್ತಿಗೆಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಕಲ್ಯಾಣದ ಮೇಲ್ವಿಚಾರಣೆ ಅಧಿಕಾರವನ್ನು ಹೊಂದಿರುತ್ತದೆ.<br>• **Director General Mines Safety (DGMS)** ರವರು ನೀಡುವ ಅನುಮತಿ ಪತ್ರದನುಸಾರ ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರ ಸುರಕ್ಷತೆಗಾಗಿ **Gum Boots, Helmet, Hand Gloves, Safety Belt, Goggles, Jacket & Mask,** ಪ್ರತಿಫಲಿತ ಸುರಕ್ಷತಾ ಜಾಕೆಟ್ ಇತರೆ ಸುರಕ್ಷಿತ ಸಾಮಗ್ರಿಗಳನ್ನು ಒದಗಿಸಬೇಕು.<br>• ಗುತ್ತಿಗೆದಾರರು ಗುತ್ತಿಗೆ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಕಾಲಕಾಲಕ್ಕೆ ಆರೋಗ್ಯ ತಪಾಸಣೆ, First-aid station and infirmary ಸಾಮಗ್ರಿಗಳ ನಿರ್ವಹಣೆ, ಕಾರ್ಮಿಕರಿಗೆ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ, ಇತ್ಯಾದಿಗಳನ್ನು ಒದಗಿಸಬೇಕು. |

ಸಂಖ್ಯೆ: ಸಿಐ-ಎಂಎಂಎಂ/343/2026

(signature)

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.